ಮಲಯಾಳ ಮೂಲ: ಇ. ಹರಿಕುಮಾರ್
ಕನ್ನಡ ಅನುವಾದ: ಎಂ.ಎಸ್. ಲಕ್ಷ್ಮಣಾಚಾರ್

# ಹಸಿರು ಮಿಡತೆಯನ್ನು ಹಿಡಿಯಲು....



ಅಂಗಳದಲ್ಲಿ ಹಾಕಿದ್ದ ಚಪ್ಪರದಲ್ಲಿ ಜನಗಳು ತುಂಬಿದ್ದರು. ಚಪ್ಪರದ ನಡುವೆ ಅಲಂಕರಿಸಿದ್ದ ಮಂಟಪದಲ್ಲಿ ಭತ್ತ ತುಂಬಿದ ಕೊಳಗವೂ, ಅದರಲ್ಲಿ ತೆಂಗಿನ ಹೊಂಬಾಳೆಯೂ ಇತ್ತು. ವರನ ದಿಬ್ಬಣ ಬರುವುದನ್ನೇ ಕಾಯುತ್ತಾ ನೆರೆದಿದ್ದ ಜನರು ಅಕ್ಷಮರಾಗುತ್ತಿದ್ದರು. ಚಪ್ಪರದ ಒಂದು ಮೂಲೆಯಲ್ಲಿ ನಾದಸ್ವರ ನುಡಿಸಲು ಕಾದಿದ್ದ ಓಲಗದವರು ಆದೇಶಕ್ಕಾಗಿ ಕಾದು ಕುಳಿತಿದ್ದರು. ಮಂಟಪದ ಮುಂಭಾಗದಲ್ಲಿ ಕುಳಿತಿದ್ದವರಲ್ಲಿ ಮಕ್ಕಳಿಗೆ ಅದರಲ್ಲೂ ಒಂದು ಹುಡುಗಿಗೆ ಬೇಸರವಾಗತೊಡಗಿತು. ಅವಳೀ ಐದು ವರ್ಷ. ತುಂಬಿದ, ನವ ವಧುವಿನ ಪುಟಾಣಿ ತಂಗಿ ಶಾಲಿನಿ. ಕೊನೆಗೆ ಅವಳು ತನ್ನ ಜತೆಗಾತಿಯರೊಂದಿಗೆ ಹೇಳಿದಳು.

'ಬನ್ರೀ, ನಾವು ಹಸಿರು ಮಿಡತೆ (Grass Hopper) ಯನ್ನು ಹಿಡಿಯೋಣ'

ಹಸಿರು ಮಿಡತೆಯ ಬಗ್ಗೆ ಅವರು ಕೇಳೇ ಇರಲಿಲ್ಲ. 'ಹಸಿರು ಮಿಡತೆ ಎಂದರೆ ಯಾವುದೇ?'

'ಬನ್ನಿ, ನಾನು ತೋರಿಸಿ ಕೊಡುತ್ತೇನೆ'

ಅವರೆಲ್ಲಾ ಎದ್ದು ಹೊರ ಹೊರಟರು.

'ನಾಲ್ಕು ಕನ್ಯೆಯರ ಪ್ರಯಾಣ ಎಲ್ಲಿಗೆ?' ಒಬ್ಬನು ಪರಿಹಾಸ್ಯದೊಂದಿಗೆ ಕೇಳಿದನು.

'ನಾವು ಹಸಿರು ಮಿಡತೆಯನ್ನು ಹಿಡಿಯಲು ಹೋಗುತ್ತಿದ್ದೇವೆ'

'ಹಸಿರು ಮಿಡತೆಯೇ?' ಅವನು ಅವಹೇಳನದೊಂದಿಗೆ ಕೇಳಿದನು.

'ಹೌದು' ಅವಳು ಗಂಭೀರವಾಗಿ ಹೇಳಿದಳು. ಹಸಿರು ಮಿಡತೆಯನ್ನು ಹಿಡಿಯುವುದು ಅಷ್ಟು ಸುಲಭವಾದ ವಿಷಯವೇನಲ್ಲವಲ್ಲ?

ಅವರ ಗಮನ ಪಕ್ಕದ ಮನೆಯ ಹಿತ್ತಲಿನ ಕಡೆಗಿತ್ತು. ಅದರ ಕಾಂಪೌಂಡ್ ಒಡೆದು ಬಿರುಕಾಗಿದ್ದ ಕಡೆಯಿಂದ ಅವರು ಆ ಹಿತ್ತಲನ್ನು ಪ್ರವೇಶಿಸಿದರು. ಅದೊಂದು ವಿಶಾಲವಾದ ಹಿತ್ತಲಾಗಿತ್ತು. ಎರಡು ಮಾವಿನ ಮರಗಳು, ಅನೇಕ ಪೊದೆಗಳು, ಇವುಗಳನ್ನು ಬಿಟ್ಟರೆ ಆ ಹಿತ್ತಲಲ್ಲಿ ಇನ್ನೇನೂ ವಿಶೇಷವಿರಲಿಲ್ಲ. ಒಂದು ಹಳೆಯ ಕುಟುಂಬವು ನಿರ್ನಾಮವಾಗಿದ್ದಂತೆ, ಆ ಮಾಳಿಗೆಯ ಅವಶೇಷಗಳು ಈ ಹಿತ್ತಲು ಮಧ್ಯದಲ್ಲಿ ನಿಂತಿದ್ದವು. ಹಿತ್ತಲಿನ ಇಕ್ಕೆಲಗಳಲ್ಲೂ ಹಿನ್ನೀರು ((Back waters) ಹರಿಯುತ್ತಿತ್ತು. ಈ ನಾಲ್ಕು ಹುಡುಗಿಯರು ಬಂದ ವಿಷಯವನ್ನು ಮರೆತು ಆ ಹಿನ್ನೀರಿನ ಅಂದಚೆಂದವನ್ನೇ ನೋಡುತ್ತಾ ನಿಂತರು. ವಿವಾಹ ಮಂಟಪದ ಸಡಗರದ ಗೊಂದಲವು ದೂರವಾಯಿತು. ಗೋಡೆಯ ಆಚೆಯ ಕಡೆ ಮಂಟಪದ ಮೇಲ್ಭಾಗವು ಕಾಣಿಸುತ್ತಿತ್ತು. ಅಷ್ಟು ದೂರದಿಂದ ನೋಡುವಾಗ ಮೊದಲೇ ಚಿಕ್ಕದಾಗಿದ್ದ ತನ್ನ ಮನೆ ಅವಳಿಗೆ ಇನ್ನೂ ಚಿಕ್ಕದಾದಂತೆ ತೋರಿತು. ಅಕ್ಕನ ಕೈ ಹಿಡಿಯುವ ವರನು ಇನ್ನೂ ಏಕೆ ಬರಲಿಲ್ಲವೆಂದು ಶಾಲಿನಿ ಯೋಚಿಸತೊಡಗಿದಳು. ಅಷ್ಟರಲ್ಲಿ ಮಿನ್ನಿ ಕೇಳಿದಳು.

'ಹಸಿರು ಮಿಡತೆ ಎಲ್ಲಿ ಸಿಗುತ್ತೆ?'

ಅಲ್ಲಿಗೆ ಬಂದ ತನ್ನ ಉದ್ದೇಶ ಶಾಲಿನಿಗೆ ಆಗ ನೆನಪಾಯಿತು.

'ಇಲ್ಲೇ ಕಾಣುತ್ತೆ ಕಣ್ರೀ' ಸುತ್ತಲೂ ನೋಡುತ್ತಾ ಅವಳೆಂದಳು. ಜೊತೆಗೆ ಹುಡುಕಾಡಲು ಆರಂಭಿಸಿದಳು. 'ನಾನೂ ನನ್ನ ಅಕ್ಕ ಆಟ ಆಡಲು ಇಲ್ಲಿಗೇ ಬರುವುದು'.

ಬೆಳಿಗ್ಗೆ ಶಾಲಿನಿಗೆ ಸ್ನಾನ ಮಾಡಿಸಿ ಅವಳ ಅಕ್ಕ ಹೊಸ ಬಟ್ಟೆ ತೊಡಿಸಿದ್ದಳು. ಹಣೆಗೆ ಪುಟ್ಟ ಬೊಟ್ಟು ಸಹ ಹಚ್ಚಿದ್ದಳು. ಅವಳು ತನ್ನ ಹಣೆಯನ್ನು ಮುಟ್ಟಿ ನೋಡಿಕೊಂಡಳು. ಬೊಟ್ಟು ಇನ್ನೂ ಅಲ್ಲೇ ಇತ್ತು. ಅವಳನ್ನು ತಯಾರು ಮಾಡಿದ ನಂತರ ಅಕ್ಕ ಹೇಳಿದ್ದಳು.

'ನಾಳೆಯಿಂದ ನೀನೇ ಸ್ನಾನ ಮಾಡಿಕೊಳ್ಳಬೇಕು. ಬಟ್ಟೆ ಹಾಕಿಕೊಳ್ಳಬೇಕು. ಗೊತ್ತಾಯಿತೇ? ನಾನೂ ಮದುವೆ ಮಾಡಿಕೊಂ-ಡು ಅವರ ಜೊತೆ ಹೊರಟು ಹೋಗುತ್ತೇನೆ'

'ಅಲ್ಲ, ಅಕ್ಕ, ಭಾವನಿಗೆ ನಮ್ಮ ಜೊತೆಯೇ ಇದ್ದರಾಗದೇ?'

ಅಕ್ಕ ಹೊರಟು ಹೋದರೆ ಉಂಟಾಗುವ ಶೂನ್ಯತೆಯ ಬಗ್ಗೆ ಆಲೋಚಿಸುವ ಸಾಮರ್ಥ್ಯ ಅವಳಿಗಿರಲಿಲ್ಲ. ಅದೆಲ್ಲಾ ಯೋಚಿಸುವಂತಿದ್ದರೆ ಅವಳಿಗೆ ಸಂಕಟವಾಗುತ್ತಿತ್ತು. ಯಾವಾಗಲೂ ರೋಗದಿಂದ ಹಾಸಿಗೆ ಹಿಡಿದು ಮಲಗಿರುತ್ತಿದ್ದ ಅವಳ ತಾಯಿ ಅವಳ ಮಟ್ಟಿಗೆ ಕೇವಲ ಒಂದು ನೆರಳಂತಿದ್ದಳು. ಅಕ್ಕನೇ ಅವಳ ವಿಷಯಗಳೆಲ್ಲವನ್ನೂ ಗಮನಿಸುತ್ತಿದ್ದುದು. ಅಕ್ಕನಿಂದ ಅವಳ ಪ್ರಶ್ನೆಗೆ ಉತ್ತರವೇನೂ ದೊರಕಲಿಲ್ಲ. ಅವಳ ಅಕ್ಕ ಒಂದು ಅವಳ ತಲೆ ಬಾಚಿ ಜಡೆ ಹಾಕುತಿದಳು. ಶಾಲಿನಿ ತನ ಪ್ರಶೆ ಮತ್ತೆ ಕೇಳಿದಳು. ದೀರ್ಘ ನಿಟ್ಟುಸಿರು ಅಕ್ಕನಿಂದ ಹೊರ ಹೊಮ್ಮಿತು. ಅವಳು ಅಕ್ಕನನ್ನು ನೋಡಿದಳು. ಅವಳ ಕಣ್ಣಲ್ಲಿ ನೀರಿತ್ತು.

'ನಮ್ಮ ಈ ಚಿಕ್ಕ ಮನೆ ಆ ಭಾವನಿಗೆ ಹಿಡಿಸುತ್ತೋ ಇಲ್ಲವೋ?'

ಬಿಂದುವಿನ ಬಾಯಲ್ಲಿ ಅಷ್ಟೇ ಬಂದರೂ, ಈ ಚಿಕ್ಕ ಮನೆ, ಅದಕ್ಕೆ ಶಾಶ್ವತ ಶಾಪದಂತಿದ್ದ ದಾರಿದ್ರ್ಯವೂ ಎಂದೇ ಅವಳು ಹೇಳ ಬಯಸಿದ್ದಳು. ಆದರೆ ಬಿಂದುವಿಗೆ ದಾರಿದ್ರ್ಯದಿಂದ ಸ್ವಲ್ಪವೂ ಕಷ್ಟವಿರಲಿಲ್ಲ. ಆದರೆ ಅವರೊಂದಿಗೆ ಪ್ರೀತಿಯೂ ನಾಸ್ತಿ ಆದರೆ? ಅವಳಿಗೆ ಹೇಗಾದರೂ ಆ ಮನೆಯಿಂದ ಪಾರಾಗಬೇಕೆಂದಿತ್ತು. ಅದು ಸ್ವಾರ್ಥ ಎಂದು ಅವಳಿಗೆ ಗೊತ್ತಿತ್ತು. ಅವಳು ದಾರಿದ್ರ್ಯದ ಕಬಂಧ ಹಸ್ತಗಳಿಂದ ಪಾರಾಗಲು ಇಚ್ಛಿಸಿದ್ದಕ್ಕಿಂತ ಪ್ರೀತಿ ವಿಶ್ವಾಸಗಳನ್ನರಸಿ ಹೊರ ಬೀಳ ಬಯಸಿದ್ದಳು. ಅವಳು ತನ್ನ ಸಂಕಟವನ್ನಡಗಿಸಿಕೊಂಡು, ಪುಟ್ಟ ತಂಗಿಯ ಮುದ್ದು ಮುಖವನ್ನು ನೋಡುತ್ತಾ ಹೇಳಿದಳು.

'ಶಾಲಿನಿ, ನೀನು ದೊಡ್ಡವಳಾದ ಮೇಲೆ ಒಬ್ಬ ಸುಂದರ ಯುವಕನು ಬಂದು ನಿನ್ನನ್ನು ಮದುವೆ ಮಾಡಿಕೊಂಡು ಹೋಗುವನು. ಆಗ ನೀನೂ ಇಲ್ಲಿಂದ ಪಾರಾಗುತ್ತೀಯ'.

'ಆ ಯುವಕನು ಯಾವಾಗ ಬರುತ್ತಾನಕ್ಕ?'

'ನೀನು ದೊಡ್ಡವಳಾದ ನಂತರ'

ಅದು ಅವಳು ಸಮಾಧಾನ ಪಡಿಸುವ ತಂತ್ರವಾಗಿತ್ತು. ಅದರಲ್ಲಿ ಅವಳು ಮುಳುಗಿದಂತೆ ನಿಂತಳು.

ಹಸಿರು ಮಿಡತೆಗಳು ಅಡಗಿ ಕುಳಿತಿವೆ. ಅಕ್ಕನ ವಿವಾಹ ನಿಶ್ಚಯದ ದಿನದಂದು ರಜನಿಯ ಜೊತೆ ಆ ಹಿತ್ತಲಲ್ಲಿ ನಡೆಯುವಾಗ ಶಾಲಿನಿ ಎಷ್ಟೋ ಹಸಿರು ಮಿಡತೆಗಳನ್ನು ಕಂಡಿದ್ದಳು. ಇಂದು ಅವೆಲ್ಲಾ ಎಲ್ಲಿ ಹೋದವು? ಮೀನುವೂ, ಮಿನಿಯೂ, ಸಜಿಯೂ ಹುಡುಕುತ್ತಿದ್ದರು. ಏನನ್ನು ಹುಡುಕುತ್ತಿರುವುದೆಂದು ಅವರಿಗೇ ಸರಿಯಾಗಿ ತಿಳಿಯದು. ಏನಾದರೂ ಒಂದು ವಸ್ತು ಅವರಿಗೆ ತಮ್ಮ ಮುಂದೆ ಪ್ರತ್ಯಕ್ಷವಾಗಿ ಬಿಡುತ್ತದೆ ಎಂಬಂತೆ ಅವರು ಹುಡುಕಾಡುತ್ತಿದ್ದರು. ಸಜಿ ಕೇಳಿದಳು:

NEXT PAGE....

ಬಿದ್ದುದಾಗಿ ತಿಳಿದುಕೊಂಡಳು. ಹಣೆಯ ಮೇಲೆ ನೋಯುತ್ತಿತ್ತು. ಮುಟ್ಟಿ ನೋಡಿದಾಗ ಅಲ್ಲಾದ ಗಾಯದಿಂದ ರಕ್ತ ಜಿನುಗುತ್ತಿರುವುದು ಗೊತ್ತಾಯಿತು. ಅವಳು ರಕ್ತಸಿಕ್ತವಾದ ಕೈಯನ್ನು ಸಹ ತೊಳೆಯದೆ ಹಾಗೇ ಕುಳಿತಿದ್ದಳು. ಬೆಳಗಾದಾಗ ಅವಳ ಹಣೆಯ ಮೇಲಿನ ಗಾಯವನ್ನು ಎಲ್ಲರೂ ಕಂಡರಾದರೂ ಯಾರೂ ಅದರ ಬಗ್ಗೆ ಕೇಳಲಿಲ್ಲ. ಸ್ನಾನ ಮಾಡಿಸುತ್ತಿದ್ದಾಗ ಶಾಲಿನಿ ಅವಳ ಹಣೆಯ ಮೇಲಿನ ಗಾಯ ಕಂಡು ಕೇಳಿದಳು.

'ಅಕ್ಕಾ ನಿನ್ನ ಹಣೆಯ ಮೇಲೆ ಏನದು ಗಾಯ?'

'ಓ ಅದಾ, ಅದು ಅಪ್ಪ ನಿನ್ನ ಅಕ್ಕನಿಗೆ ತಂದ ಮದುವೆಯ ಉಡುಗೊರೆ'

ಶಾಲಿನಿಗೆ ಸಂಕಟವಾಯಿತು. ಅವಳ ತುಟಿಗಳು ನಡುಗತೊಡಗಿದವು. ಅವಳು ಅಳಲಾರಂಭಿಸಿದಳು. ಅವಳು ಅಕ್ಕನನ್ನು ತಬ್ಬಿಕೊಂಡು ಕೆನ್ನೆಗೆ ಮುತ್ತು ಕೊಡುತ್ತಾ ಕೇಳಿದಳು.

'ಅಕ್ಕಾ, ನಿನಗೆ ನೋವಾಗಲಿಲ್ಲವೇ?'

ಹಸಿರು ಮಿಡತೆಯು ತನಗೆ ಮೋಸ ಮಾಡುತ್ತಿದೆಯೆಂದು ಶಾಲಿನಿಗೆ ಮನದಟ್ಟಾಯಿತು. ಇಲ್ಲದಿದ್ದರೆ ಅವು ಹೀಗೆ ಮಾಯವಾಗಲು ಕಾರಣವೇನು? ಅವಳು ಮಿಡತೆಯನ್ನು ಹುಡುಕಲು ಆರಂಭಿಸಿದಳು. ಹುಲ್ಲಿನ ನಡುವೆ, ಗಿಡಗಳ, ರೆಂಬೆಗಳ ಮೇಲೆ, ಎಲ್ಲಾ ಕಡೆಗಳಲ್ಲೂ ಅವಳ ಸೂಕ್ಷ್ಮವಾದ ಕಣ್ಣುಗಳು ಹುಡುಕಾಡಿದವು. ಈಗಾಗಲೇ ಶಾಲಿನಿ ಮನೆಯಿಂದ ಬಹು ದೂರ ಬಂದು ಬಿಟ್ಟಿದ್ದಳು. ಅವಳಿಗೆ ಬಹಳ ಅಳು ಬರುತ್ತಿತ್ತು. ಅಕ್ಕನ ಮದುವೆಯ ದಿನದಂದು ಅವಳಿಗೆ ಅಲ್ಲೇ ಇರಬೇಕೆಂದಿತ್ತು. ಹಸಿರು ಮಿಡತೆಯನ್ನು ಹಿಡಿಯದೆ ಹೋಗುವುದಾದರೂ ಹೇಗೆ? ಕೊನೆಗೆ ಒಂದು ತುಂಬೆ ಗಿಡದ ಎಲೆಯ ಮೇಲೆ ಅವಳು ಒಂದು ಪುಟಾಣಿ ಹಸಿರು ಮಿಡತೆಯನ್ನು ಕಂಡಳು. ಚಿಕ್ಕದಾದರೂ ಆ ಹಸಿರು ಮಿಡತೆ ತನ್ನ ಧರ್ಮವನ್ನಾಚರಿಸುತ್ತದೆ ಎಂದು ಅವಳು ಆಸೆ ಪಟ್ಟಳು. ಇನ್ನು ಅದನ್ನೇ ಹಿಡಿಯುವುದು ಅವಳ ಕೆಲಸ. ಆದರೆ ಜೊತೆಗಾತಿಯರಿಲ್ಲದ್ದು ಅವಳಿಗೆ ಬಲು ತೊಂದರೆಯಾಯಿತು. ಮೂರು ಜನರೂ ಇದ್ದಿದ್ದರೆ ಕೆಲಸ ಸುಗಮವಾಗುತ್ತಿತ್ತು. ಅವಳು ಮೆಲ್ಲನೆ ಸದ್ದಿಲ್ಲದೆ ಹಸಿರು ಮಿಡತೆಯನ್ನು ಸಮೀಪಿಸಿದಳು. ತನ್ನ ಪುಟ್ಟ ಬೆರಳುಗಳಿಂದ ಅದರ ಬಾಲವನ್ನು ಹಿಡಿದಳು. ಅವಳು ಜೋರಾಗಿ ಕೂಗುತ್ತಾ ಕುಪ್ಪಳಿಸತೊಡಗಿದಳು. ಆ ಹಸಿರು ಮಿಡತೆ ಇವಳು ಮುಟ್ಟಿದೊಡನೆ ಹಾರಿ ಅವಳ ಮುಖದ ಮೇಲೆ ಕುಳಿತು ಬಿಟ್ಟಿತು. ನಿಮಿಷಾರ್ಧದಲ್ಲಿ ಅದು ನೆಲದ ಮೇಲೆ ಜಿಗಿದು ಬಿಟ್ಟಿತು. ಅದಕ್ಕೆ ಹೆದರಿಯೇ ಅವಳು ಕೂಗಿ ಕುಪ್ಪಳಿಸಿದ್ದು.

ಹಸಿರು ಮಿಡತೆಯನ್ನು ಹಿಡಿಯುವುದು ಅಪಾಯಕರವಾದ ಕೆಲಸ ಎಂಬುದು ಅವಳಿಗೆ ಸ್ಪಷ್ಟವಾಯಿತು. ತಾನು ಅದಕ್ಕೆ ತಯಾರಾಗಿ ಬಂದಿರಲಿಲ್ಲ ಎಂಬುದು ಅವಳಿಗೀಗರ್ಥವಾಯಿತು. ಒಂದು ಬಲೆಯಂತಹುದೇನಾದರೂ ಬೇಕು. ಆ ಮೇಲೆ ಅದನ್ನು ಹಾಕಿ ಮುಚ್ಚಲು ಒಂದು ಚೀಲ ಬೇಕು. ಇದ್ಯಾವುದೂ ಇಲ್ಲದಿದ್ದರೆ ಕಷ್ಟವೇ. ಮತ್ತೆ ಇವಳದನ್ನು ಹಿಡಿಯಲು ಮುಂದಾದಾಗ ಈ ಐದು ವರ್ಷದ ಬಾಲಕಿಯನ್ನು ಅದು ಆಟ ಆಡಿಸಿ ಬಿಟ್ಟಿತು. ಹದಿನೈದು ನಿಮಿಷಗಳ ದೀರ್ಘ ಬೇಟೆಯಲ್ಲಿ ಶಾಲಿನಿ ಸುಸ್ತಾಗಿ ಬಿಟ್ಟಳು. ಕೊನೆಗೂ ಈ ಚೀರಾಟ ಕುಣಿದಾಟ ನಂತರ ಅವಳು ನೋಡುವಾಗ ಅದು ಅಲ್ಲಿಂದ ಮಾಯವಾಗಿ ಬಿಟ್ಟಿತ್ತು. ಅವಳಿಗೆ ಕೈಕಾಲುಗಳು ಸೋದತೊಡಗಿದವು. ಅವಳು ಒಂದು ಮಾವಿನ ಮರದ ಕೆಳಗೆ ಹೋಗಿ ಕುಳಿತು ಬಿಟ್ಟಳು. ಹಿನ್ನೀರಿನ ಮೇಲಿನಿಂದ ಬೀಸಿ ಬಂದ ತಂಗಾಳಿ ಅವಳನ್ನು ಸಂತೈಸುವಂತಿತ್ತು.

ಬಿಂದು ವಿವಾಹ ಮಂಟಪದಲ್ಲಿ ವರನೊಂದಿಗೆ ಕುಳಿತಿದ್ದಾಗ ತನ್ನ ಪುಟ್ಟ ತಂಗಿಗಾಗಿ ಸುತ್ತಲೂ ಹುಡುಕಿದಳು. ಅವಳ ಸ್ನೇಹಿತೆಯರೂ, ಮಿಕ್ಕವರೂ ಎಲ್ಲರೂ ಅಲ್ಲಿದ್ದರಾದರೂ ಶಾಲಿನಿ ಮಾತ್ರ ಅಲ್ಲಿರಲಿಲ್ಲ.

ಎಲ್ಲಾದರೂ ಕುಳಿತಿರಬೇಕು ಅಥವಾ ಓಡಿ ಆಟವಾಡುತ್ತಿರಬೇಕು. ವಧೂವರರು ಪರಸ್ಪರ ಉಂಗುರ ಬದಲಾಯಿಸಿದರು. ಹಾರ ಸಮರ್ಪಣೆ ಮಾಡಿಕೊಂಡರು. ಎಲ್ಲಾ ಯಾಂತ್ರಿಕವಾಗಿ ನಡೆಯುತ್ತಿತ್ತು. ಅವಳ ಮನಸ್ಸು ದೂರ ದೂರಕ್ಕೆ ಸಾಗಿ ಶಾಲಿನಿಯನ್ನು ಹುಡುಕುತ್ತಿತ್ತು. ಅದರ ಮಧ್ಯೆ ವರನು ಏನೋ ಕೇಳಿದಾಗ ಅವಳಿಗೆ ಅದು ಕೇಳಿಸಲೇ ಇಲ್ಲ. ವರನು ಕೋಪಿಸದೆ ನಗುತ್ತಾ ಮತ್ತೆ ಕೇಳಿದನು:

'ನೀನು ಎಲ್ಲಿದ್ದೆ ಬಿಂದೂ?'

'ಆ... ನನ್ನನ್ನು ಏನಾದರೂ ಕೇಳಿದಿರಾ?'

'ಎಲ್ಲಿದ್ದೀ ಅಂತ ಕೇಳಿದೆ ಅಷ್ಟೆ'

'ನಾನು ನನ್ನ ತಂಗಿ ಶಾಲಿನಿಯನ್ನು ನೆನೆಯುತ್ತಿದ್ದೆ. ಅಕ್ಕನ ಮದುವೆಯನ್ನು ನೋಡಬೇಕೆಂದು ಹೇಳಿ ಅವಳು ಮುಂದಿನ ಸಾಲಿನಲ್ಲೇ ಕುಳಿತಿರುತ್ತೇನೆಂದು ಹೇಳಿದ್ದಳು. ಈಗ ನೋಡಿದರೆ ಅವಳಿಲ್ಲವೇ ಇಲ್ಲ'

'ಇಬ್ಬರೂ ಏಳಿ... ಎದ್ದೇಳಿ... ಅನಂತರ ವರನು ವಧುವಿನ ಕೈ ಹಿಡಿದು ಪ್ರದಕ್ಷಿಣೆ ಮಾಡಲಿ. ಆದೇ, ಹಾಗೆಯೇ... ಈ ಹುಡುಗಿಯರು ದೀಪಗಳನ್ನು ಹಿಡಿದು ಮುಂದೆ ನಡೆಯತೊಡಗಲಿ...'

ಊಟ ಮಾಡಲು ಕುಳಿತಾಗ ಬಿಂದು ಮತ್ತೆಯೂ ಶಾಲಿನಿಯನ್ನು ನೆನಪು ಮಾಡಿಕೊಂ-ಡಳು. ಯಾರನ್ನು ಕೇಳುವುದು ಎಂದು ಯೋಚಿಸುತ್ತಿರಬೇಕಾದರೆ ಮಿನಿಯನ್ನೂ, ಮೀನುವನ್ನೂ ಕಂಡಳು.

'ಶಾಲಿನಿ ಎಲ್ಲಿ?' ಅವಳು ಕೇಳಿದಳು.

'ಆಂ... ನಮಗೇನು ಗೊತ್ತು?'

'ಆಗ ನೀವು ನಾಲ್ಕು ಜನರೂ ಒಟ್ಟಿಗೆ ಹೊರಕ್ಕೆ ಹೋಗುತ್ತಿರುವುದನ್ನು ನಾನು ನೋಡಿದೆನಲ್ಲಾ?' ಅಲ್ಲಿದ್ದ ಒಬ್ಬನು ಕೇಳಿದನು. ಆ ನಾಲ್ಕು ಹುಡುಗಿಯರು ಪರ್ಯಟನಕ್ಕೆ ಹೊರಟಾಗ ಕಂಡ ಪ್ರತ್ಯಕ್ಷ ಸಾಕ್ಷಿಯಾಗಿದ್ದವನು.

'ಆಂ...' ಮಿನಿಗೆ ಜ್ಞಾಪಕ ಬಂತು. ಅವಳು ಹೇಳಿದಳು. 'ಶಾಲಿನಿ ಹಸಿರು ಮಿಡತೆಯನ್ನು ಹಿಡಿಯಲು ಹೋಗಿದ್ದಾಳೆ.'

'ಹಸಿರು ಮಿಡತೆಯನ್ನೇ?'

'ಹೌದು ಪಕ್ಕದ ಮನೆಯ ಹಿತ್ತಲಿಗೆ ಹೋಗಿದ್ದಾಳೆ.

'ಹಸಿರು ಮಿಡತೆಯೇ?' ಬಿಂದುವಿಗೆ ಅಳು ಬಂತು. ಅವಳು ಬಿಕ್ಕಳಿಸುವುದನ್ನು ಅಡಗಿಸಲು ಒದ್ದಾಡಿಬಿಟ್ಟಳು. ಇಲ್ಲಿ ತನ್ನ ಮದುವೆ ನಡೆಯುತ್ತಿದ್ದರೆ, ಶಾಲಿನಿ ಹಸಿರು ಮಿಡತೆಯನ್ನು ಹಿಡಿಯಲು ಹೋಗಿದ್ದಾಳೆ. ಇವಳೇಕೆ ಹೀಗೆ ಮಾಡಿದಳೆಂಬುದು ಹೊಳೆಯದಾಗ ಬಿಂದುವಿಗೆ ತುಂಬಾ ಸಂಕಟವಾಯಿತು. ಅವಳು ಎದ್ದು ಹೊರಟಳು. ವರನು ಅವಳನ್ನು ಹಿಂಬಾಲಿಸಿದನು. ಪಕ್ಕದ ಹಿತ್ತಲಿನಲ್ಲಿದ್ದ ಒಂದು ಮಾವಿನ ಮರದ ಕೆಳಗೆ ಅವರು ಅವಳನ್ನು ಕಂ-ಡರು.

ಶಾಲಿನಿ ಮುದುಡಿಕೊಂಡು ಮಲಗಿದ್ದಳು. ಗಾಢ ನಿದ್ದೆಯಲ್ಲಿದ್ದಳು. ಹಿನ್ನೀರಿನ ಮೇಲಿನಿಂದ ಬರುತ್ತಿದ್ದ ಒಳ್ಳೆಯ ತಂಪಾದ ಗಾಳಿಯಲ್ಲಿ ಅವಳ ತಲೆಗೂದಲು ನೃತ್ಯ ಮಾಡುತ್ತಿತ್ತು. ಅವಳು ನಿದ್ದೆಯಲ್ಲಿ ಹಸಿರು ಮಿಡತೆಯ ಸ್ವಪ್ನ ಕಾಣುತ್ತಲಿದ್ದಳು. ನೆಲದ ತುಂಬಾ ಹಸಿರು ಮಿಡತೆಗಳು ನಡೆದಾಡುತ್ತಿವೆ. ತನಗೆ ಬೇಕಿದ್ದಷ್ಟು ಮಿಡತೆಗಳನ್ನು ಧಾರಾಳವಾಗಿ ಬಾಚಿ ತುಂಬಿಕೊಳ್ಳಬಹುದು.

ಬಿಂದು ಸ್ವಲ್ಪ ಹೊತ್ತು ತನ್ನ ಪುಟ್ಟ ತಂಗಿ ಶಾಲಿನಿಯನ್ನು ನೋಡುತ್ತಾ ನಿಂತಳು. ಆಗಲೇ ಅವಳು ಕಂಡದ್ದು. ಶಾಲಿನಿಯ ಮುಖವನ್ನು ದಿಟ್ಟಿಸಿ ನೋಡುತ್ತಿರುವಂತೆ ಒಂದು ಪುಟ್ಟ ಹಸಿರು ಮಿಡತೆಯು ಅಲ್ಲಿ ನಿಂತಿತ್ತು. ಅವಳು ಶಾಲಿನಿಯನ್ನು ಬಾಚಿ ಎತ್ತಿಕೊಂಡಳು. ಆಗ ಶಾಲಿನಿ ಕಣ್ಣು ತೆರೆದಳು.

'ಶಾಲಿನಿ, ನೀನೇನು ಮಾಡುತ್ತಿದ್ದೆ ಇಲ್ಲಿ?'

'ನಾನೇ...' ಅವಳು ಆಶ್ಚರ್ಯಚಕಿತಳಾಗಿ ಸುತ್ತಲೂ ನೋಡಿದಳು. 'ನಾನು ಹಸಿರು ಮಿಡತೆಯನ್ನು ಹಿಡಯಲು ಬಂದೆ. ಅಕ್ಕಾ ನಿನ್ನ ಮದುವೆ ಆಗಿ ಹೋಯಿತೆ?' ಅವಳು ಕುಂಠಿತಳಾಗಿ ಕೇಳಿದಳು.

ಬಿಂದು ಅದಕ್ಕುತ್ತರವೀಯದೆ ಪುಟ್ಟ ಹಸಿರು ಮಿಡತೆಯನ್ನು ತೋರಿಸುತ್ತಾ 'ಇದೋ ನೋಡು, ನಿನಗಾಗಿ ಅದು ಕಾದು ನಿಂತಿದೆ ಪಾಪ' ಹೇಳಿದಳು.

ಶಾಲಿನಿ ತುಟಿ ಸೊಟ್ಟಗೆ ಮಾಡಿ ನಕ್ಕಳು. ನನ್ನನ್ನು ಅಲ್ಲಿ, ಇಲ್ಲಿ ಇಷ್ಟು ಹೊತ್ತು ಓಡಿಯಾಡಿಸಿ ಇಲ್ಲಿ ನೀನು ನಿದ್ದೆ ಮಾಡಿದೆಯಾ ಎಂದು ಅದು ಕೇಳುತ್ತಿದೆಯೇನೋ ಎನ್ನಿಸಿ ಅವಳಿಗೆ ನಗು ಬಂದಿತ್ತು. ಅಷ್ಟರಲ್ಲಿ ತಲೆ ಎತ್ತಿ ನೋಡಿದ ಶಾಲಿನಿಗೆ 'ಭಾವ' ಕಾಣಿಸಿದರು. ಒಂದೇ ನೋಟದಲ್ಲಿ 'ಭಾವ' ಅವಳಿಗೆ ಹಿಡಿಸಿದರು. ಅವಳು ಹೇಳಿದಳು.

'ಅಕ್ಕ ನಿನ್ನ ಈ 'ಭಾವ' ನನಗೆ ತುಂಬಾ ಇಷ್ಟವಾದರಕ್ಕ'

ವರನು ನಸುನಗುತ್ತಾ ಅವಳನ್ನು ಎತ್ತಿಕೊಳ್ಳಲು ತನ್ನ ಕೈ ಚಾಚಿದನು. ಶಾಲಿನಿ ಆತನ ತೋಳಿಗೆ ಜಾರಿದಳು.

'ಬಿಂದು, ಇಲ್ಲಿ ನೋಡು' ಆತನು ಹೇಳಿದನು. 'ನಾವು ಇವಳನ್ನು ನಮ್ಮ ಜೊತೆ ಕರೆದುಕೊಂಡು ಹೋಗಿಬಿಡೋಣ. ಇವಳು ನಮ್ಮ ಜೊತೆಯಲ್ಲೇ ಇರಲಿ. ಏನಂತೀ? ಅದೂ ಅಲ್ಲದೆ ಅಲ್ಲಿ ಧಾರಾಳವಾಗಿ ಹಸಿರು ಮಿಡತೆಗಳಿವೆ. ಹಿಡಿಯಲು ಯಾರೂ ಇಲ್ಲ.'

ಆತನು ಶಾಲಿನಿಯನ್ನು ಕೇಳಿದನು. 'ಏನು ಶಾಲಿನೀ, ಈ ಭಾವನ ಜೊತೆ ಬರುತ್ತೀಯಾ?'

ಅವಳು ಎಂದೋ ತಯಾರಾಗಿದ್ದಳು.

ಬಿಂದುವಿನ ಕಣ್ಣುಗಳು ಅರಳಿದವು. ಎರಡು ಮಾತುಗಳೂ – ಶಾಲಿನಿಯು ನಮ್ಮ ಜೊತೆ ಬರುವುದೂ, ಅಲ್ಲಿ ಧಾರಾಳವಾಗಿ ಹಸಿರು ಮಿಡತೆಗಳು ಇವೆ ಎನ್ನುವುದು ಆತನೆಂದಂತೆ ಸರಿಯಾಗುವುದಾದರೆ? ಅವಳ ಕಣ್ಣುಗಳು ಆಸೆ, ಆಕಾಂಕ್ಷೆ, ನಿರೀಕ್ಷೆಗಳಿಂದ ಮಿನುಗತೊಡಗಿದವು. ■

BACK TO MAIN PAGE